ವ್ಯವಸ್ಥೆಯಲ್ಲಿ ಇದಕ್ಕೆಲ್ಲಾ ಅವಕಾಶ ಇರಬೇಕು. ತಾವು ಇವತ್ತು ಇಲ್ಲಿ ಇದ್ದೀರಿ, ನಾಳೆ ದಿವಸ ನೀವೇ ಹೋರಾಟ ಮಾಡುವಂಥ ಸಂದರ್ಭ ಬರಬಹುದು. ಆದ್ದರಿಂದ, ಕೊಡುತ್ತೇವೆ ಅಥವಾ ಕೊಡುವುದಿಲ್ಲ ವೆಂದು ಉತ್ತರ ಹೇಳುವುದು ಬೇಡ. ನಂತರ ನೀವು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಸರ್ಕಾರದ ಪರವಾಗಿ ಒಂದು ಜವಾಬ್ದಾರಿಯುತವಾದ ಉತ್ತರವನ್ನು ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಸಭೆಗಳನ್ನು ಮಾಡುವುದಕ್ಕೆ ಕಬ್ಬನ್‌ಪಾರ್ಕ್‌ನಲ್ಲಿ ಮತ್ತು ನ್ಯಾಷನಲ್ ಹೈಸ್ಕೂಲ್ ಗ್ರೌಂಡ್‌ನಲ್ಲಿ ಜಾಗ ಕಡಿಮೆಯಾಗಿರುವುದರಿಂದ ಎಲ್ಲಿ ಜಾಗವನ್ನು ಒದಗಿಸಬೇಕೆಂಬ ಬಗ್ಗೆ ಸರ್ಕಾರದ ಮಟ್ಟದಲ್ಲಿ ಗಂಭೀರವಾಗಿ ಪರಿಶೀಲನೆ ಮಾಡಲಾಗುತ್ತಿದೆ. ಕಬ್ಬನ್‌ಪಾರ್ಕ್ ರಕ್ಷಣೆ ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಲೇಬೇಕಾಗಿದೆ. ರ್‍ಯಾಲಿಗಳನ್ನು ಮತ್ತು ಪ್ರತಿಭಟನಾ ಮೆರವಣಿಗೆ ಮಾಡುವವರಿಗೆ ಜಾಗ ಕಲ್ಪಿಸಿಕೊಡಬೇಕೆಂಬ ಸಲಹೆಯನ್ನು ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ. ಈ ಸಲಹೆಯನ್ನು ಸರ್ಕಾರ ಒಪ್ಪುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ವಿಷಯ:- ಗೋಕಾಕ್ ನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುವ ಕುರಿತು.

291 (2106) **ಶ್ರೀ. ಚಂದ್ರಶೇಖರ್ ನಾಯಕ್ (ಗೋಕಾಕ್):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಗೋಕಾಕ್ ನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಸ್ಥಾನಮಾನ ನೀಡುವ ಬಗ್ಗೆ ಸರ್ಕಾರದವರ ಪರಿಶೀಲನೆಯಲ್ಲಿಯೇ?

ಆ) ಹಾಗಿದ್ದಲ್ಲಿ, ಅದು ಯಾವ ವರ್ಷದಿಂದ ಜಾರಿಗೆ ಬರುವುದು?

ಇ) ಜಿಲ್ಲಾ ಸ್ಥಾನಮಾನ ನೀಡುವ ಬಗ್ಗೆ ಯೋಜನೆಯ ರೂಪರೇಷೆಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ಜಿಲ್ಲಾ ಪುನರ್–ವಿಂಗಡಣಾ ವರದಿಗಳು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಜಿಲ್ಲೆಗಳ ಪುನರ್–ವಿಂಗಡಣೆ ಸಮಯದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗುವುದು.

1. ಚಾರಿತ್ರಿಕ ಹಿನ್ನೆಲೆ,
2. ಜನಸಂಖ್ಯೆ,
3. ವಿಸ್ತೀರ್ಣ,
4. ಪ್ರಾದೇಶಿಕ ಹಿಂದುಳಿದಿರುವಿಕೆ,
5. ಭೌಗೋಳಿಕ ಮತ್ತು ಸಂಪರ್ಕ,
6. ಸಾಗುವಳಿ ಪ್ರದೇಶದ ವಿಸ್ತೀರ್ಣ,

7. ನೀರಾವರಿ ಸಾಮರ್ಥ್ಯ,
8. ರಾಜಸ್ವ ಸಾಮರ್ಥ್ಯ,
9. ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆ,
10. ಕೈಗಾರಿಕಾ ಸಾಮರ್ಥ್ಯ,
11. ಪುನರಾವರ್ತನೆಗೊಳ್ಳುವ ಅಭಾವ ಪರಿಸ್ಥಿತಿ ಮತ್ತು ಪ್ರವಾಹಗಳ ಸಮಸ್ಯೆಗಳ ಶೀಘ್ರ ನಿರ್ವಹಣೆಯ ಅಗತ್ಯಗಳು.

ಶ್ರೀ ಚಂದ್ರಶೇಖರ ನಾಯಕ್:- ಮಾನ್ಯ ಅಧ್ಯಕ್ಷರೆ, ಪಂಚಾಯತ್ ರಾಜ್ ಆಡಳಿತವನ್ನು ಜಾರಿಗೆ ತಂದು ಅಧಿಕಾರ ವಿಕೇಂದ್ರಿಕರಣ ಮಾಡಿದಂಥ ಈ ನಮ್ಮ ಜನತಾದಳದ ಘನ ಸರ್ಕಾರ ಜಿಲ್ಲಾ ಪುನರ್–ವಿಂಗಡಣೆ ಬಗ್ಗೆ ಏಕೆ ಮಹತ್ವ ಕೊಡುತ್ತಿಲ್ಲ ಎನ್ನುವುದು ನನ್ನ ಮೊದಲ ಪ್ರಶ್ನೆ. ಬೆಳಗಾವಿ ಜಿಲ್ಲೆಯಲ್ಲಿ ಭೌಗೋಳಿಕವಾಗಿ ಮಧ್ಯದಲ್ಲಿ ಗೋಕಾಕ್ ನಗರವಿದ್ದು ಅಲ್ಲಿ 60 ಸಾವಿರ ಜನ-ಸಂಖ್ಯೆ ಇದೆ. ಬೆಳಗಾವಿಯಿಂದ ಅಥಣಿಗೆ ಹೋಗಬೇಕಾದರೆ 140 ಕಿ.ಮೀ. ಪ್ರಯಾಣ ಮಾಡಬೇಕು, ಅದೇ ರೀತಿ ರಾಮದುರ್ಗಕ್ಕೆ ಹೋಗಬೇಕಾದರೂ 120 ಕಿ.ಮೀ. ಪ್ರಯಾಣ ಮಾಡಬೇಕು. ಆದುದ-ರಿಂದ, ಅಲ್ಲಿ ಬರತಕ್ಕಂಥ ದೊಡ್ಡ ಊರುಗಳನ್ನು ತಾಲ್ಲೂಕುಗಳಾಗಿ ಪರಿವರ್ತಿಸಬೇಕು. ಅದೇ ರೀತಿ-ಯಾಗಿ ಗದಗ್, ದಾವಣಗೆರೆ, ಹುಬ್ಬಳ್ಳಿ, ಉಡುಪಿ ಮುಂತಾದ ನಗರಗಳನ್ನು ಪುನರ್–ವಿಂಗಡಣೆ ಮಾಡಿ ಆಡಳಿತವನ್ನು ಚುರುಕುಗೊಳಿಸುವುದಕ್ಕೆ ಒಂದು ಮಾರ್ಗವನ್ನು ಏಕೆ ಕಂಡು ಹಿಡಿಯಬಾರ-ದೆಂದು ನನ್ನ ಎರಡನೆ ಪ್ರಶ್ನೆ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ನಾವು ಹಲವಾರು ವರ್ಷಗಳಿಂದ ಕೇಳುತ್ತಾ ಬಂದಿದ್ದೇವೆ. ಇವತ್ತಿನ ದಿವಸ ತಾಲ್ಲೂಕು ಕೇಂದ್ರಗಳಿಂದ ಜಿಲ್ಲಾ ಕೇಂದ್ರಗಳಿಗೆ ಬರಬೇಕಾದರೆ ಸುಮಾರು 4 ಗಂಟೆಗಳ ಕಾಲ ಪ್ರಯಾಣ ಮಾಡಬೇಕಾಗುತ್ತದೆ. ಆದುದರಿಂದ, ತೀವ್ರ-ವಾಗಿ ಈ ಜಿಲ್ಲಾ ಪುನರ್–ವಿಂಗಡಣಾ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಸಚಿವರು), (ಕಂದಾಯ ಸಚಿವರ ಪರವಾಗಿ):- ಮಾನ್ಯ ಸಭಾಧ್ಯಕ್ಷರೆ, ಈ ಬಗ್ಗೆ ಸರ್ಕಾರ ತೀವ್ರವಾಗಿ ಯೋಚನೆ ಮಾಡುತ್ತಿದೆ. ಈ ಬಗ್ಗೆ ವರದಿ ಸಲ್ಲಿಸಲು ವಾಸುದೇವನ್‌ರವರ ಕಮಿಟಿ, ಹುಂಡೇಕಾರ್‌ರವರ ಕಮಿಟಿ, ಗದ್ದೀಗೌಡರ್ ಕಮಿಟಿ-ಯನ್ನು ರಚಿಸಲಾಗಿತ್ತು, ಆ ಕಮಿಟಿಗಳು ವರದಿ ಕೊಟ್ಟ ನಂತರ ಸಂಪುಟದ ಉಪ ಸಮಿತಿಯು ಪರಿ-ಶೀಲನೆ ಮಾಡಿ ಅಫಿಷಿಯಲ್ ಕಮಿಟಿಗೆ ರೆಫರ್ ಮಾಡಲಾಗಿದೆ. ಈ ಬಗ್ಗೆ ಸರ್ಕಾರವೂ ಆದಷ್ಟು ಬೇಗ ಕ್ರಮ ಕೈಗೊಳ್ಳಲು ಉತ್ಸುಕವಾಗಿದೆಯೆಂದು ತಿಳಿಸಲು ಬಯಸುತ್ತೇನೆ.

ಶ್ರೀ ಚಂದ್ರಶೇಖರ ನಾಯಕ್:- ಈ ವಿಷಯದಲ್ಲಿ ಸಮಿತಿಗಳನ್ನು ರಚನೆ ಮಾಡುವುದರಿಂದ ಕಾಲ ವಿಳಂಬವಾಗುವುದರಿಂದ ಆದಷ್ಟು ಬೇಗ ಜಿಲ್ಲಾ ಪುನರ್–ವಿಂಗಡಣೆ ಮಾಡುವುದಕ್ಕೆ ಸರ್ಕಾರ ತೀವ್ರವಾದ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

12.50 ಪಿ.ಎಂ.

ಅಧ್ಯಕ್ಷರು:- ತೀವ್ರವಾಗಿ ಜಾರಿಗೆ ತರತಕ್ಕಂಥ, ಸೂಚನೆಯನ್ನು ಕೊಡತಕ್ಕಂಥ ಒಂದು ಸಮಿತಿಯನ್ನು ರಚಿಸಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಯಾವುದೇ ಒಂದು ತೀರ್ಮಾನಕ್ಕೆ ನಾವು ಬರುವುದಾದರೂ ಕೂಡ ವಿಷಯವನ್ನು ವಿಮರ್ಶೆ ಮಾಡಿ, ಸಮಿತಿಗಳನ್ನು ಇಟ್ಟುಕೊಂಡು ಸಮಿತಿಗಳಲ್ಲಿ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ತೆಗೆದುಕೊಂಡು ಆಯಾಯ ಪ್ರದೇಶಗಳಲ್ಲಿ ಏನೇನು ಆಗಬೇಕೆಂದು ತಿಳಿದುಕೊಂಡು ಮಾಡಬೇಕೇ ಹೊರತು, ಮಂತ್ರಿಗಳು ಕೂಡಲೇ ಮಾಡಲು ಆಗದೇ ಇರತಕ್ಕಂಥ ವಿಷಯವಾಗಿದೆ. ಇದು ಬಹಳ ವರ್ಷಗಳಿಂದ ಇರತಕ್ಕಂಥದ್ದು. ಸರಕಾರವು ಈ ಬಗ್ಗೆ ಚಿಂತನೆ ಮಾಡಿ ಈಗಾಗಲೇ ಹಲವಾರು ಕಮಿಟಿಗಳನ್ನು ಮಾಡಿ ಈಗ ಉಪಸಮಿತಿಯನ್ನು ಮಾಡಿದೆ. ಆದಷ್ಟು ಜಾಗ್ರತೆಯಾಗಿ ಈ ಕುರಿತು ಕಾರ್ಯಕ್ರಮ ಕೈಗೊಳ್ಳಲು ಸರಕಾರವು ಸಿದ್ಧವಾಗಿದೆ.

ಶ್ರೀ ಕರಡಿ ಸಂಗಣ್ಣ:- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿನ ಜಿಲ್ಲೆಗಳ ಪುನರ್–ವಿಂಗಡಣೆಯ ಬಗ್ಗೆ ಅನೇಕ ಸಾರಿ ಇಲ್ಲಿ ಪ್ರಸ್ತಾಪವಾಗಿದೆ. ಸರಕಾರವು ಕೂಡ ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುವಲ್ಲಿ ಬಹಳಷ್ಟು ವಿಳಂಬ ಮಾಡುತ್ತಿದೆ. ನಾವು ಪತ್ರಿಕೆಗಳಲ್ಲಿ ನೋಡಿದ ಹಾಗೆ ಬೇರೆ ಬೇರೆ ರಾಜ್ಯಗಳಲ್ಲಿ ಬಿಹಾರ ಮತ್ತು ಆಂಧ್ರಪ್ರದೇಶಗಳಲ್ಲಿ ಹೆಚ್ಚುವರಿ ಜಿಲ್ಲೆಗಳನ್ನು ಮಾಡಲಾಗಿದೆ. ಹೆಚ್ಚುವರಿ ಜಿಲ್ಲೆಗಳನ್ನು ಮಾಡಿದರೆ ನಮಗೆ ಕೇಂದ್ರದ ಪಾಲಿನ ಹಣವು ಹೆಚ್ಚು ಲಭಿಸುತ್ತದೆ. ಮಾನ್ಯ ಗದ್ದೀಗೌಡರ ವರದಿಯಲ್ಲಿ ಕೊಪ್ಪಳ ನಗರವನ್ನು ಜಿಲ್ಲಾಕೇಂದ್ರವನ್ನಾಗಿ ಮಾಡಬೇಕೆಂದು ಹೇಳಿದ್ದಾರೆ. ನಾವು ಇವೊತ್ತು ರಾಯಚೂರು ಜಿಲ್ಲೆಯನ್ನು ತಲುಪಬೇಕಾದರೆ 220 ಕಿ.ಮೀ.ಗಳ ಅಂತರವನ್ನು ದಾಟಬೇಕು. ಆಡಳಿತಾತ್ಮಕ ದೃಷ್ಟಿಯಿಂದಲೂ ಇವೊತ್ತು ಜಿಲ್ಲಾಪುನರ್–ವಿಂಗಡಣೆಯಾಗುವುದು ಅವಶ್ಯಕವಾಗಿದೆ. ಈ ಕೆಲಸವನ್ನು ವಿಳಂಬವಿಲ್ಲದೆ ಮಾಡಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ವಾಸುದೇವರಾವ್ ಸಮಿತಿ, ಹುಂಡೇಕಾರ್ ಸಮಿತಿ ಮತ್ತು ಗದ್ದಿಗೌಡರ ಸಮಿತಿ. ಈ ಮೂರು ಸಮಿತಿಗಳಲ್ಲಿ ಶಿಫಾರಸ್ಸು ಮಾಡಿದಂಥ ಗದಗನ್ನು ಜಿಲ್ಲಾಕೇಂದ್ರವನ್ನಾಗಿ ಮಾಡಲು ಇನ್ನೂ ವಿಚಾರ ಮಾಡಬೇಕಾಗಿದೆ ಎಂದು ಸರಕಾರದವರು ಹೇಳುತ್ತಾರೆ. ಈ ಸಮಿತಿಗಳಲ್ಲಿ ಶಿಫಾರಸ್ಸು ಮಾಡಿದಂಥ ಬೆಂಗಳೂರು ನಗರ ಜಿಲ್ಲೆಯನ್ನು ಮಾಡಲು ಯಾವ ಶಿಫಾರಸ್ಸೂ ಬೇಕಾಗಿಲ್ಲ. ಈ ತಾರತಮ್ಯ ಏಕೆ? ದೊಡ್ಡ ಜಿಲ್ಲೆಗಳು ಮುಂಬೈ ಕರ್ನಾಟಕದಲ್ಲಿ, ಉತ್ತರ ಕರ್ನಾಟಕದಲ್ಲಿ ಏನಿವೆ ಆ ಪ್ರದೇಶದಲ್ಲಿನ ಜನರಿಗೆ ಅನುಕೂಲ ಮಾಡಿಕೊಡಬೇಕೆನ್ನುವ ದೃಷ್ಟಿಯಿಂದ ಜಿಲ್ಲಾ ವಿಂಗಡಣೆ ಮಾಡಬೇಕೆಂಬ ಕಾರಣಕ್ಕಾಗಿ ವಾಸುದೇವರಾವ್ ಸಮಿತಿ ಅಧಿಕಾರಕ್ಕೆ ಬಂತು. ಮುಂದೆ ಹುಂಡೇಕಾರ್ ಸಮಿತಿಯನ್ನು ನೇಮಿಸಿದರು. ಇವೆರಡನ್ನು ಮುಂದಕ್ಕೆ ಹಾಕಲು ಮತ್ತೆ ಗದ್ದಿಗೌಡರ್ ಸಮಿತಿಯನ್ನು ನೇಮಿಸಿದರು. ಈಗ ಎಲ್ಲವನ್ನೂ ಮುಂದೆ ಹಾಕಲು ಮತ್ತೊಂದು ಉಪ ಸಮಿತಿಯನ್ನು ಮಾಡಿದ್ದಾರೆ. ತಮಗೆ ಇದನ್ನು ಮಾಡಬೇಕೆಂದರೆ ಅದಕ್ಕೆ ಯಾವ ಸಮಿತಿಯು

ಬೇಕಾಗಿಲ್ಲ. ತಮಗೆ ಬೇಡ ಎಂದೆನಿಸಿದರೆ ಈ ಸಮಿತಿಗಳ ವರದಿಯನ್ನು ಮುಂದೆ ಹಾಕುತ್ತೀರಿ. ಆದ್ದರಿಂದ ದಯಮಾಡಿ ಈ ರೀತಿಯಾಗಿ ಮಾಡಬಾರದು. ಮಾನ್ಯ ಉಪ–ಮುಖ್ಯಮಂತ್ರಿಯವರು ಸದನದಲ್ಲಿ ಅವರಿಂದ ಮುಂಬೈ ಕರ್ನಾಟಕದ ಜನರಿಗೆ ಅನುಕೂಲವಾಗಲು ಸಾಧ್ಯವಾಗುವಂತೆ ಹೊಸ ಜಿಲ್ಲಾಕೇಂದ್ರಗಳನ್ನು ಕೂಡಲೇ ಮಾಡಲು ಕ್ರಮ ತೆಗೆದುಕೊಳ್ಳುವ ಬಗ್ಗೆ ಭರವಸೆಯನ್ನು ತಮ್ಮಿಂದ ಬಯಸುತ್ತೇನೆ.

ಅಧ್ಯಕ್ಷರು:- ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಈ ಪ್ರಶ್ನೆಯಲ್ಲಿ ಐದಾರು ಜನರು ಉಪ–ಪ್ರಶ್ನೆಗಳನ್ನು ಕೇಳಲು ಕೈ ಎತ್ತಿದ್ದಾರೆ. ಕಂದಾಯ ಮಂತ್ರಿಗಳು ಕೂಡ ಇಲ್ಲ. ಅವರ ಪರವಾಗಿ ಮಾನ್ಯ ಗೋವಿಂದೇಗೌಡರು ಉತ್ತರಿಸುತ್ತಿದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ವಿತ್‌ಹೆಲ್ಡ್ ಮಾಡುತ್ತೇನೆ. ಮುಂದೆ ಇದನ್ನು ಡಿಸ್‌ಕಶನ್‌ಗೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ಬಗ್ಗೆ ಡಿಸ್‌ಕಶನ್ ಮಾಡುವ ಅವಶ್ಯಕತೆ ಇಲ್ಲ. ಏಕೆ ಇಲ್ಲವೆಂದರೆ ಈಗ ಸರಕಾರ ಒಂದು ಡಿಸಿಷನ್ ತೆಗೆದುಕೊಂಡು ಅದನ್ನು ಇಂಪ್ಲಿಮೆಂಟ್ ಮಾಡಬೇಕಾಗಿದೆ ಅಷ್ಟೆ. ಮಾಡಬೇಕೋ, ಬಿಡಬೇಕೋ ಎನ್ನುವುದೂ ಇಲ್ಲ. ಕ್ಯಾಬಿನೆಟ್ ಇದರ ಬಗ್ಗೆ ಡಿಸ್‌ಕಶನ್ ಮಾಡಿ ಎಂಟು ಜಿಲ್ಲೆಗಳನ್ನು ಮಾಡಬೇಕೆಂಬ ಬಗ್ಗೆ ಈಗಾಗಲೇ ವರದಿಯನ್ನು ಆಕ್ಸೆಪ್ಟ್ ಮಾಡಿದ್ದಾರೆ. ಹೀಗೆ ಆಕ್ಸೆಪ್ಟ್ ಮಾಡಿಯಾದ ಮೇಲೆ ಹಣದ ಕೊರತೆಯಿಂದಾಗಿ ಈ ವರ್ಷ 4 ಜಿಲ್ಲೆಗಳನ್ನು ಮಾಡಬೇಕು, ಮುಂದಿನ ವರ್ಷ ನಾಲ್ಕು ಹೊಸ ಜಿಲ್ಲಾಕೇಂದ್ರಗಳನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡು ಮೊದಲ ಹಂತದ ನಾಲ್ಕು ಜಿಲ್ಲೆಗಳನ್ನು ಆಲ್‌ರೆಡಿ ಡಿಕ್ಲೇರ್ ಮಾಡಿಬಿಟ್ಟರು. ಆ ಸಂದರ್ಭದಲ್ಲಿ ಕೊಪ್ಪಳ, ಶಹಪೂರ್ ಮತ್ತು ಹಾವೇರಿಗಳಲ್ಲಿ ಅಜಿಟೇಶನ್ ಪ್ರಾರಂಭವಾದಾಗ ಆ ಡಿಸಿಶನ್ ಡೆಫರ್ ಆಯಿತು. ಆದ್ದರಿಂದ ಕೇವಲ ಇಂಪ್ಲಿಮೆಂಟೇಶನ್ ಮಾತ್ರ ಉಳಿದಿದೆ. ಉಳಿದೆಲ್ಲಾ ವಿಷಯಗಳು ಮುಗಿದಿವೆ. ತಮ್ಮ ಹತ್ತಿರ ಹಣವಿಲ್ಲದಿದ್ದರೆ ನಾಲ್ಕು ಜಿಲ್ಲೆಗಳನ್ನು ಈಗ ಮಾಡಿ. ಬೇಕಾದರೆ ನಾನ್‌ಕಾಂಟ್ರವರ್ಷಿಯಲ್ ಇರತಕ್ಕಂಥವುಗಳನ್ನು ಮಾಡಿ. ಮುಂದಿನ ವರ್ಷದಲ್ಲಿ ಮತ್ತೆ ನಾಲ್ಕು ಮಾಡಿ. ಈ ಬಗ್ಗೆ ಡೆಪ್ಯುಟಿ ಚೀಫ್ ಮಿನಿಸ್ಟರ್‌ರವರು ಮನಸ್ಸು ಮಾಡಿದರೆ ಆಗುತ್ತದೆಯೇ ಹೊರತಾಗಿ ರೆವಿನ್ಯೂ ಡಿಪಾರ್ಟ್‌ಮೆಂಟಿನಿಂದ ಹೋಗತಕ್ಕಂಥಾದ್ದು ಯಾವುದೂ ಇಲ್ಲ.

ಅಧ್ಯಕ್ಷರು:- ಇದನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ.

ವಿಷಯ:- ಶಿರ್ಶಿ ಸಬ್ ರಿಜಿಸ್ಟ್ರಾರ್ ಕಛೇರಿಯಿಂದ ಸರಕಾರಕ್ಕೆ ಜಮಾ ಆದ ಆದಾಯ.

292 (1953) **ಶ್ರೀ ಪಿ.ಎಸ್. ಜಯವಂತ್ (ಶಿರ್ಶಿ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ 3 ವರ್ಷಗಳಿಂದ ಶಿರ್ಶಿ ಸಭೆ ರಿಜಿಸ್ಟ್ರಾರ್ ಕಛೇರಿಯಿಂದ ಸರಕಾರಕ್ಕೆ ಜಮಾ ಆದ ಆದಾಯ ಎಷ್ಟು?